ಕರ್ನಾಟಕ ನೀರಾವರಿ ನಿಗಮವು ಶೇಖರಿಸಲಾದ ಸಾಲದ ಹಣ

2483 (3161) ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ನೀರಾವರಿ ನಿಗಮ ಪ್ರಾರಂಭವಾದಗಿನಿಂದ ಇದುವರೆವಿಗೂ ಎಷ್ಟು ಹಣವನ್ನು ಸಾಲದ ರೂಪದಲ್ಲಿ ಶೇಖರಿಸಲಾಗಿದೆ (ವಿವರ ನೀಡುವುದು):

ಆ) ಈ ಹಣವನ್ನು ಯಾವ ಯಾವ ಯೋಜನೆಗಳಿಗೆ ಖರ್ಚು ಮಾಡಲಾಗಿದೆ?

ಇ) ಹಣವನ್ನು ಒದಗಿಸಲಾಗಿದ್ದರೂ ಗುರಿಯನ್ನು ತಲುಪದೇ ಇರುವ ಹೊಸ ಕಾಮಗಾರಿಗಳೆಷ್ಟು?

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ನೀರಾವರಿ ಸಚಿವರು) :—

ಅ) ಕರ್ನಾಟಕ ನೀರಾವರಿ ನಿಗಮ ನಿಯಮಿತವು ಪ್ರಾರಂಭವಾದಾಗಿನಿಂದ ಇದುವರೆವಿಗೂ ಸಾಲದ ರೂಪದಲ್ಲಿ ಶೇಖರಿಸಿದ ಹಣದ ವಿವರ ಕೆಳಕಂಡಂತಿದೆ

ಕ್ರ.ಸಂ.	ಬಾಂಡ್‌ಗಳು	1999-2000	2000-2001	ಒಟ್ಟು
		(ರೂ.ಕೋಟಿಗಳಲ್ಲಿ)	(ರೂ.ಕೋಟಿಗಳಲ್ಲಿ)	(ರೂ.ಕೋಟಿಗಳಲ್ಲಿ)
1)	ಸೀರೀಸ್ I	260.89	-	260.89
2)	ಸೀರೀಸ್-II	214.43	-	214.43
3)	ಸೀರೀಸ್-III	-	185.65	185.65
			ಒಟ್ಟು	660.97

ಆ) ವಿವರ ಕೆಳಕಂಡಂತಿದೆ :

ಕ್ರ. ಸಂ.	ಯೋಜನೆಗಳು	1999-2000	2000-01	2000-02 (30-6-2001ರವರೆಗೆ)	ಒಟ್ಟು
		(ರೂ.ಕೋಟಿಗಳಲ್ಲಿ)			(ರೂ.ಕೋಟಿಗಳಲ್ಲಿ)
1)	ಘಟಪ್ರಭ	49.72	58.84	13.52	120.08
2)	ಮಲಪ್ರಭ	60.25	45.76	15.78	121.79
3)	ಹಿಪ್ಪರಗಿ	9.07	4.29	4.00	17.36
4)	ಮಾರ್ಕಂಡೇಯ	9.83	48.88	13.60	72.31
5)	ಹರಿನಾಲಾ	15.66	10.21	0.70	26.57
6)	ಯು.ಟಿ.ಪಿ	10.98	48.26	34.52	93.76

1	2	3	4	5	6
7)	ಸಿಂಗಟಲೂರು	7.50	6.42	0.55	14.47
8)	ಭೀಮಾ ಏತ	1.99	2.29	0.86	5.14
9)	ಗಂಡೋರಿ ನಾಲಾ	8.16	23.67	3.31	35.14
10)	ತುಂಗಾ ಏತ	-	-	-	-
11)	ಕಳಸ ನಾಲಾ	-	-	-	-
12)	ಬಂದೂರಾ ನಾಲಾ	-	-	-	-
	ಒಟ್ಟು	173.16	246.62	86.84	506.62

ಇ) ಯಾವುದೂ ಇಲ್ಲ.

ಪಶ್ಚಿಮ ವಾಹಿನಿ ಯೋಜನೆ ಅನುಷ್ಠಾನ

2484 (3120) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಶ್ಚಿಮವಾಹಿನಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಯೋಚಿಸಿದೆಯೇ? ಇದಕ್ಕೆ ತಗಲುವ ವೆಚ್ಚ ಎಷ್ಟು? ಇದರಿಂದ ಕರಾವಳಿ ಜಿಲ್ಲೆಗಳಿಗೆ ಆಗುವ ಲಾಭ ಯಾವುದು.

ಆ) ಈ ಯೋಜನೆಯ ಅನುಷ್ಠಾನಕ್ಕೆ ಬೇಕಾಗುವ ಸಂಪನ್ಮೂಲಗಳನ್ನು ಕ್ರೋಡೀಕರಿಸಲು ಸರ್ಕಾರ ಯಾವ ಕ್ರಮಕ್ಕೆಗೊಳ್ಳಲಾಗಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಹೌದು, ಪರಿಶೀಲಿಸಲಾಗುತ್ತಿದೆ. ಈ ಯೋಜನೆಯಿಂದ ಕರಾವಳಿ ಜಿಲ್ಲೆಗಳ 39506.18 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ. ಅಲ್ಲದೆ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸುವುದೊಂದಿಗೆ ಅಂತರ್ಜಲ ಮಟ್ಟ ಹೆಚ್ಚಿಸಬಹುದಾಗಿದೆ.

ಆ) ಹುಡ್ಕೋ ಸಂಸ್ಥೆಯಿಂದ ಧನ ಸಹಾಯ ಪಡೆಯುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತಿದೆ.